# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ – 577 007.

**ಕಾಲೇಜು ಅಭಿವೃದ್ಧಿ ಪರಿಷತ್**

ಸಂಖ್ಯೆ:ದಾವಿವಿ/ಸಿಡಿಸಿ/ಸಂ–143/2023–24/8494 ದಿನಾಂಕ:09.10.2023

**: ಕಛೇರಿ ಜ್ಞಾಪನ :**

**ವಿಷಯ :** ಮುಂದುವರಿಕೆ ಸಂಯೋಜನೆ ನೀಡುವ ಬಗ್ಗೆ.

**ಉಲ್ಲೇಖ :**
1. ಕಾಲೇಜಿನ ಅರ್ಜಿ ಸಂಖ್ಯೆ:AFF/218/AF/P13GST0040/2023-24/3479
2. ವಿಶ್ವವಿದ್ಯಾನಿಲಯದ ಸ್ಥಳೀಯ ತಪಾಸಣಾ ಸಮಿತಿ ವರದಿ ದಿನಾಂಕ:03.06.2023.
3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:07.10.2023.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರಲ್ಲಿ ಕಾಲೇಜಿನ ಮುಂದುವರಿಕೆ ಸಂಯೋಜನೆ ಕುರಿತು ಸ್ಥಳೀಯ ತಪಾಸಣಾ ಸಮಿತಿಯು ನೀಡಿರುವ ಶಿಫಾರಸ್ಸನ್ನು ದಿನಾಂಕ:16.06.2023ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಭೆ ಮತ್ತು ದಿನಾಂಕ:17.06.2023ರಂದು ನಡೆದ ಸಿಂಡಿಕೇಟ್ ಸಭೆಗಳಲ್ಲಿ ಯಥಾವತ್ತಾಗಿ ಅನುಮೋದಿಸಲಾಗಿದೆ.

ಆದ್ದರಿಂದ, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಸೆಕ್ಷನ್ 59(17)ರ ಮೇರೆಗೆ, ವಿಶ್ವವಿದ್ಯಾನಿಲಯದ ಸ್ಥಳೀಯ ತಪಾಸಣಾ ಸಮಿತಿಯು ವಿಧಿಸಿರುವ ಷರತ್ತುಗಳನ್ನು ಹಾಗೂ ಆನ್‌ಲೈನ್ ಸಂಯೋಜನೆಯ ನಿಗದಿತ ಮಾನದಂಡಗಳನ್ನು(Defined Parameters) ಕಡ್ಡಾಯವಾಗಿ ಅನುಷ್ಠಾನ/ ಕಾರ್ಯಗತಗೊಳಿಸಿ ಪೂರಕ ದಾಖಲೆಗಳೊಂದಿಗೆ ಅನುಪಾಲನಾ ವರದಿಯನ್ನು ದಿನಾಂಕ:30.12.2023ರೊಳಗಾಗಿ ವಿಶ್ವವಿದ್ಯಾನಿಲಯಕ್ಕೆ ಕಡ್ಡಾಯವಾಗಿ ಸಲ್ಲಿಸುವ ಷರತ್ತಿಗೊಳಪಟ್ಟು 2023–24ನೇ ಶೈಕ್ಷಣಿಕ ಸಾಲಿನ ಅವಧಿಗೆ ಮಾತ್ರ ಈ ಕೆಳಕಂಡಂತೆ ಸಂಯೋಜನೆ ಮುಂದುವರೆಸಲಾಗಿದೆ.

| | | | | |
|---|---|---|---|---|
| **ಕಾಲೇಜಿನ ಹೆಸರು** | : | **ಸೇಂಟ್ ಮೆರೀಸ್ ಕಾಲೇಜ್ ಆಫ್ ಎಜ್ಯುಕೇಶನ್, ಚಿತ್ರದುರ್ಗ** | | |
| **ಆನ್‌ಲೈನ್ ಸಂಯೋಜನಾ ಅಂಕಗಳು** | : | **68.75%** | | |
| **ಪದವಿ** | **ಭಾಷೆಗಳು** | **ಐಚ್ಛಿಕ ವಿಷಯ ಸಮೂಹಗಳು** | **ಪ್ರವೇಶಮಿತಿ** | **ಯೂನಿಟ್** |
| ಬಿ.ಇಡಿ., | ಕನ್ನಡ, ಇಂಗ್ಲೀಷ್ | ಐಚ್ಛಿಕ ವಿಷಯಗಳು | 50 | 02 |

**ಷರತ್ತುಗಳು:**

1. ಆನ್‌ಲೈನ್ ಸಂಯೋಜನೆಯ ನಿಗದಿತ ಮಾನದಂಡಗಳ (Defined Parameters) 08 ಅಂಶಗಳನ್ನು ಪೂರೈಸುವುದು ಹಾಗೂ ಕಾಲೇಜು/ಸಂಸ್ಥೆಯ ಹೆಸರಿನಲ್ಲಿ ಸ್ವಂತ ಜಮೀನು ಹೊಂದಿರುವುದು ಕಡ್ಡಾಯವಾಗಿರುತ್ತದೆ.
2. ಈ ಕೆಳಕಂಡ ಆನ್‌ಲೈನ್ ಸಂಯೋಜನೆಯ ನಿಗದಿತ ಮಾನದಂಡಗಳನ್ನು (Defined Parameters) ಪೂರೈಸಿರುವುದಿಲ್ಲ. ಸದರಿ ನಿಗದಿತ ಮಾನದಂಡಗಳನ್ನು ಮುಂದಿನ ಎರಡು ಶೈಕ್ಷಣಿಕ ಅವಧಿಯೊಳಗಾಗಿ ಅನುಷ್ಠಾನಗೊಳಿಸತಕ್ಕದ್ದು. ಒಂದು ವೇಳೆ ಅನುಷ್ಠಾನಗೊಳಿಸದೇ ಇದ್ದ ಪಕ್ಷದಲ್ಲಿ ಪ್ರಥಮ ವರ್ಷದ ಪದವಿಗಳಿಗೆ ಪ್ರವೇಶಾತಿಯನ್ನು ನಿಷಿದ್ಧಗೊಳಿಸಲಾಗುವುದು. ಅಂತಹ ಸಂದರ್ಭದಲ್ಲಿ ದ್ವಿತೀಯ ಮತ್ತು ತೃತೀಯ ಪದವಿ ವಿದ್ಯಾರ್ಥಿಗಳು ತಮ್ಮ ಅಂತಿಮ ಪದವಿ ತರಗತಿಗಳನ್ನು ಪೂರ್ಣಗೊಳಿಸುವವರೆಗೆ ಮಾತ್ರ ಕಾಲೇಜನ್ನು ನಡೆಸಲು ಅವಕಾಶ ನೀಡಲಾಗುವುದು. ನಂತರ ಕಾಲೇಜಿಗೆ ನೀಡಲಾಗಿರುವ ಸಂಯೋಜನೆಯನ್ನು ರದ್ದುಪಡಿಸಲಾಗುವುದು.

| Sl. No. | Parameter | Minimum Value or Quality required as per UGC / KSU Act | Value / Quality as per LIC |
|---|---|---|---|
| 3 | Laboratory Area per Student, in square feet/student | 10 square feet/ student | 0.00, Not Complied |
| 4 | Library Area per Student, in square feet/student | 7.5 square feet/ student | 0.00, Not Complied |
| 5 | Book Bank for SC/ST Students available? | Should be Available | Not Available |

ಸಂಯೋಜನೆ ವರದಿ ಪ್ರತಿ ಲಗತ್ತಿಸಲಾಗಿದೆ.

ಆದೇಶದ ಮೇರೆಗೆ,

ಕುಲಸಚಿವರು

ಕುಲಸಚಿವರು
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ-577007

ಗೆ,

1. ಪ್ರಾಂಶುಪಾಲರು, ಸೇಂಟ್ ಮೆರೀಸ್ ಕಾಲೇಜ್ ಆಫ್ ಎಜ್ಯುಕೇಶನ್, ಕೋಟೆ ರಸ್ತೆ, ಕೆ. ಬಿ. ಬಡಾವಣೆ, ಚಿತ್ರದುರ್ಗ – 577 501.
2. ಕಛೇರಿ ಪ್ರತಿ.